ಅವಕಾಶ ಕಲ್ಪಿಸಲಾಯಿತು. ಆದರೆ, ಈ ವ್ಯವಸ್ಥೆಯನ್ನು ಏಪ್ರಿಲ್ 2000 ರಿಂದ ಸ್ಥಗಿತಗೊಳಿಸಲಾಯಿತು. ಸ್ಥಗಿತಗೊಳಿಸಿದ ಕ್ರಮವನ್ನು ಮೇ 2000 ರಲ್ಲಿ ಒಂದು ಸಾರ್ವಜನಿಕ ಹಿತಾಸಕ್ತಿ ರಿಟ್ ಅರ್ಜಿ ಕ್ರಮ ಸಂಖ್ಯೆ : 16714/2000 ಇದರ ಮೇರೆಗೆ ಪ್ರಶ್ನಿಸಿದ್ದು, ಮಾನ್ಯ ಉಚ್ಚ ನ್ಯಾಯಾಲಯವು ತಡೆಯಾಜ್ಞೆ ನೀಡಿತು. ನಂತರ ನ್ಯಾಯಾಲಯದ ಸೂಚನೆಗನುಗುಣವಾಗಿ ವಾಹನ ನಿಲುಗಡೆ ವ್ಯವಸ್ಥೆಯನ್ನು ತಾತ್ಕಾಲಿಕವಾಗಿ ಮುಂದುವರಿಸಿದ್ದು, ಈ ಅವಧಿಯು ದಿನಾಂಕ : 15–11–2007ಕ್ಕೆ ಮುಕ್ತಾಯವಾಗುತ್ತದೆ.

496 (870) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :– ಮಾನ್ಯ ಪೌರಾಡಳಿತ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ನಗರಸಭೆಗಳು, ಟೌನ್ ಮುನಿಸಿಪಾಲಿಟಿಗಳು ಹಾಗೂ ಟೌನ್ ಪಂಚಾಯ್ತಿಗಳು ಎಷ್ಟು;

ಆ) ಆಕ್ಟ್ರಾಯ್ ರದ್ದಾದ ಮೇಲೆ ಈ ಸಂಸ್ಥೆಗಳ ಕಾರ್ಯನಿರ್ವಹಣೆಗೆ ಸರ್ಕಾರ ಯಾವ ರೀತಿಯ ಹಣವನ್ನು ನೀಡಲಾಗುತ್ತಿದೆ;

ಇ) ಹಣದ ಕೊರತೆಯಿಂದ ಬಹುತೇಕ ಸಂಸ್ಥೆಗಳು ತೊಂದರೆಗೆ ಸಿಕ್ಕಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಆಲಂಗೂರು ಶ್ರೀನಿವಾಸ (ಪೌರಾಡಳಿತ ಸಚಿವರು) :

ಅ) 1) ನಗರಸಭೆಗಳು – 44

2) ಪುರಸಭೆಗಳು – 94

3) ಪಟ್ಟಣ ಪಂಚಾಯ್ತಿಗಳು – 68

ಆ) ಆಕ್ಟ್ರಾಯ್ ರದ್ದಾದ ನಂತರ ರಾಜ್ಯ ಹಣಕಾಸು ಆಯೋಗದಿಂದ ಹಾಗೂ 12ನೇ ಹಣಕಾಸು ಆಯೋಗದಿಂದ ನಗರ ಸ್ಥಳೀಯ ಸಂಸ್ಥೆಗಳಿಗೆ ಕಾರ್ಯ ನಿರ್ವಹಣೆಗೆ ಹಣ ನೀಡಲಾಗುತ್ತಿದೆ.

ಇ) ಬಂದಿದೆ.